8. ಹೆಚ್.ಆರ್. ನಾಗರಾಜ್, ಸಂ. 485
   ಮುಖ್ಯ ರಸ್ತೆ, ಕೊರಟಗೆರೆ ಟೌನ್,
9. ಟಿ.ಎಂ. ಕಲಾವತಿ, ಖಾತಾ ನಂ. 381,
   ಕೋಳಾಲ ಕೊರಟಗೆರೆ ತಾ:

ರಾಜ್ಯದಲ್ಲಿ ಲಾಟರಿ ಟಿಕೇಟುಗಳಿಂದ ಆಗುತ್ತಿರುವ ದುಷ್ಪರಿಣಾಮಗಳು

783(823) ಶ್ರೀ ಚೌಡರೆಡ್ಡಿ (ಚಂತಾಮಣಿ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೀತಿಯ ಲಾಟರಿಗಳು ಮತ್ತು ಮಟ್ಕಾಗಳು ಚಾಲನೆಯಲ್ಲಿ ಇದೆ; ಮತ್ತು ಯಾವ ಯಾವ ರಾಜ್ಯಕ್ಕೆ ಸಂಬಂಧಪಟ್ಟಿರುತ್ತದೆ.

ಆ) ಈ ಲಾಟರಿಗಳಿಂದ ಎಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಆದಾಯ ರೂಪದಲ್ಲಿ ಬರುತ್ತಿದೆ;

ಇ) ಲಾಟರಿ ವ್ಯವಹಾರಗಳಲ್ಲಿ ಬಡ ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದವರು ದುರಾಸೆ ಪಟ್ಟು ಹಣ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪಕ್ಕದ ತಮಿಳು ನಾಡು ರಾಜ್ಯದಲ್ಲಿ ಲಾಟರಿ ಮತ್ತು ಮಟ್ಕಾಗಳನ್ನು ಈ ಸರ್ಕಾರವು ನಿಷೇಧಿಸಿರುವುದು ಈ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದರೆ, ಈ ರೀತಿ ಕ್ರಮ ಕೈಗೊಳ್ಳಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಾಬು ರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಸರ್ಕಾರದಿಂದ ಸಾಂಪ್ರದಾಯಿಕ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿಗಳನ್ನು ನಡೆಸಲಾಗುತ್ತಿದೆ. ಸಾಂಪ್ರದಾಯಿತ ಲಾಟರಿಗಳಡಿಯಲ್ಲಿ ಈ ಕೆಳಕಂಡ ಡ್ರಾಗಳನ್ನು ನಡೆಸಲಾಗುತ್ತಿದೆ:

1. ಕೃಷ್ಣ ಸಾಪ್ತಾಹಿಕ ಡ್ರಾ
2. ನಂದಿ ಸಾಪ್ತಾಹಿಕ ಡ್ರಾ
3. ಕಾವೇರಿ ಸಾಪ್ತಾಹಿಕ ಡ್ರಾ
4. ಕಬಿನಿ ಸಾಪ್ತಾಹಿಕ ಡ್ರಾ
5. ತುಂಗ ಸಾಪ್ತಾಯಿಕ ಡ್ರಾ
6. ನೇತ್ರಾವತಿ ಸಾಪ್ತಾಯಿಕ ಡ್ರಾ
7. ಅದೃಷ್ಟನಿಧಿ ಸಾಪ್ತಾಯಿಕ ಡ್ರಾ
8. ಭದ್ರ ಸಾಪ್ತಾಯಿಕ ಡ್ರಾ
9. ಕಪಿಲಾ ಸಾಪ್ತಾಯಿಕ ಡ್ರಾ
10. ಆಶಾನಿಧಿ ಸಾಪ್ತಾಯಿಕ ಡ್ರಾ
11. ಐಶ್ವರ್ಯನಿಧಿ ಮಾಸಿಕ ಡ್ರಾ

ಗಣಕೀಕೃತ ನೆಟ್‌ವರ್ಕ್ ಲಾಟರಿ ಅಡಿಯಲ್ಲಿ ಲಕ್ಕಿ-3 ಎಂಬ ಡ್ರಾ ನಡೆಸಲಾಗುತ್ತಿದೆ. ಹೊರ ರಾಜ್ಯಗಳು ಸಹ ಈ ಎರಡು ಮಾದರಿಯ ಡ್ರಾಗಳನ್ನು ನಡೆಸುತ್ತಿವೆ. ಪ್ಲೇವಿನ್ ಮೂಲಕ ಈ ಕೆಳಕಂಡ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿದ್ದಾರೆ:-

1. ಸಿಕ್ಕಿಂ ಸರ್ಕಾರ:
    1. ಸೂಪರ್ ಲೋಟೋ
    2. ಥಂಡರ್ ಬಾಲ್
2. ಮಹಾರಾಷ್ಟ್ರ ಸರ್ಕಾರ:
    1. ಮಹಾಲೋಟೋ
    2. ಬೋನಸ್‌ಬಾಲ್

ರಾಜ್ಯದಲ್ಲಿ ಮಟ್ಕಾ ಚಾಲನೆಯಲ್ಲಿರುವುದಿಲ್ಲ.

ಅ) ಕರ್ನಾಟಕ ಸಾಂಪ್ರದಾಯಿಕ ಲಾಟರಿಯಿಂದ ವಾರ್ಷಿಕ ಸುಮಾರು ರೂ. 10 ಕೋಟಿ ಹಾಗೂ ಆನ್‌ಲೈನ್ ನೆಟ್ ವರ್ಕ್ ಲಾಟರಿಯಿಂದ ಮೊದಲ ವರ್ಷದಲ್ಲಿ ಕನಿಷ್ಟ 100 ಕೋಟಿಗಳಷ್ಟು ಆದಾಯ ಬರಲಿದೆ.

ಆ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಬಂದಿದೆ.

ಉ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಚಿಂತಾಮಣಿಯಲ್ಲಿ ಅಂಗಡಿ ಮಳಿಗೆಗಳ ಅಪೂರ್ಣ ಕಾಮಗಾರಿ

784(824) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರದ ಹೃದಯ ಭಾಗದಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ರೈಟ್ಸ್ ಕಂಪೆನಿ (ಭಾರತ ಸರ್ಕಾರದ ನಿಗಮ) ಮುಖಾಂತರ ಅಂಗಡಿ ಮಳಿಗೆಗಳನ್ನು ಶೇ. 90 ಭಾಗದಷ್ಟು 1994 ರಲ್ಲಿ ಮುಗಿಸಿದ್ದು 1995ನೇ ಮಧ್ಯ ಭಾಗದೊಳಗಾಗಿ ಅವರಿಗೆ 70 ಲಕ್ಷ ಪಾವತಿಸಿರುವುದು ನಿಜವೇ?

ಆ) ಒಟ್ಟು ಆ ಕಟ್ಟಡದ ಅಂದಾಜು ಒಂದು ಕೋಟಿ ಐದು ಲಕ್ಷ ಆಗಿದ್ದು, ಈಗ ಪೂರ್ತಿ ಮಾಡದೆ ಮಿಕ್ಕ ಹಣ ರೈಟ್ಸ್‌ನವರಿಗೆ ಪಾವತಿ ಮಾಡದೆ ಕಟ್ಟಡ ಉಪಯೋಗಕ್ಕೆ ಬಾರದೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಟ್ಟಡದಲ್ಲಿ 194 ಅಂಗಡಿಗಳು ಇದ್ದು, ಇದರಿಂದ ಚಿಂತಾಮಣಿ ನಗರಸಭೆಗೆ ಯಾವರೀತಿಯ ವರಮಾನವೂ ಇಲ್ಲದೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಚಿಂತಾಮಣಿ ನಗರದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ರೈಟ್ಸ್ ಕಂಪೆನಿ (ಭಾರತ ಸರ್ಕಾರದ ನಿಗಮ) ಮುಖಾಂತರ 194 ಅಂಗಡಿ ಮಳಿಗೆಗಳ ನಿರ್ಮಾಣ ಕಾಮಗಾರಿ (ಶೇ.90) ರಷ್ಟು ಪೂರ್ಣಗೊಂಡಿದ್ದು, 1995 ರ ಮಧ್ಯ ಭಾಗದೊಳಗಾಗಿ ರೂ. 58 ಲಕ್ಷಗಳನ್ನು ರೈಟ್ಸ್ ಕಂಪೆನಿಗಳ ಪಾವತಿ ಮಾಡಲಾಗಿದೆ.